ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## 2022ರ ಫೆಬ್ರವರಿ 16ರಂದು ನಡೆದ ಪ್ರಶಿಕ್ಷಣ ಪರಿಷತ್ 32ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಿಕ್ಷಣ ಪರಿಷತ್‌ನ 32ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಫೆಬ್ರವರಿ 16, 2022ರ ಬುಧವಾರ ಬೆಳಿಗ್ಗೆ 11.30** ಗಂಟೆಗೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

ಹಾಜರಿದ್ದವರು:

| | | |
|---|---|---|
| ೧. | **ಪ್ರೊ. ಕೆ.ಇ. ದೇವನಾಥನ್,** ಮಾನ್ಯ ಕುಲಪತಿಗಳು, ಕ.ಸಂ.ವಿ. | ಅಧ್ಯಕ್ಷರು |
| ೨. | **ಡಾ. ಶಾಂತಲಾ ವಿಶ್ವಾಸ,** ಪ್ರಾಧ್ಯಾಪಕರು, ಮಂಗಳೂರು | ಸದಸ್ಯರು |
| ೩. | **ವಿದ್ವಾನ್ ಎಸ್.ಎನ್. ಶಲ್ವನಾರಾಯಣ,** ನಿವೃತ್ತ ಪ್ರಾಧ್ಯಾಪಕರು, ಮೇಲುಕೋಟೆ | ಸದಸ್ಯರು |
| ೪. | **ಶ್ರೀ ಕೆ.ಎಸ್. ಸೂರ್ಯನಾರಾಯಣ,** ಬೆಂಗಳೂರು | ಸದಸ್ಯರು |
| ೫. | **ಶ್ರೀ ಶರಣ್ ಗುರ್ಜಾರ್,** ಬೆಂಗಳೂರು | ಸದಸ್ಯರು |
| ೬. | **ಡಾ. ಕೆ.ಎಮ್. ಮಹದೇವಯ್ಯ,** ಪ್ರಾಚಾರ್ಯರು (ಪ್ರ), ಮೈಸೂರು | ಸದಸ್ಯರು |
| ೭. | **ಡಾ. ಎಸ್.ಎಸ್. ನಿರಂಜನಮೂರ್ತಿ,** ಪ್ರಾಚಾರ್ಯರು, ತುಮಕೂರು | ಸದಸ್ಯರು |
| ೮. | **ಪ್ರೊ. ವೀರನಾರಾಯಣ ಎನ್.ಕೆ. ಪಾಂಡುರಂಗಿ,** ಡೀನ್, ವೇದಾಂತ ನಿಕಾಯ, ಕ.ಸಂ.ವಿ. | ಸದಸ್ಯರು |
| ೯. | **ಪ್ರೊ. ಶಿವಾನಿ ವಿ.,** ಡೀನ್ ಶಾಸ್ತ್ರ ನಿಕಾಯ, ಕಸಂವಿ | ಸದಸ್ಯರು |
| ೧೦. | **ಪ್ರೊ. ಸಿ. ಪಾಲಯ್ಯ,** ಡೀನ್, ವಿದ್ಯಾರ್ಥಿ ಕಲ್ಯಾಣ, ಕಸಂವಿ | ಸದಸ್ಯರು |
| ೧೧. | **ಪ್ರೊ. ವಿ. ಗಿರೀಶ್‌ಚಂದ್ರ,** ಕುಲಸಚಿವರು (ಪ್ರ) & ಡೀನ್, ಭಾಷಾನಿಕಾಯ, ಕ.ಸಂ.ವಿ. | ಸದಸ್ಯ ಕಾರ್ಯದರ್ಶಿ |

ಗೈರುಹಾಜರಿ:

| | | |
|---|---|---|
| ೧. | **ಅಪರ ಮುಖ್ಯ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಪ್ರೊ. ಬಿ.ಎ. ದೊಡಮನಿ,** ಮೈಸೂರು | ಸದಸ್ಯರು |
| ೭. | **ಶ್ರೀ ಶ್ರೀನಿವಾಸ ಡಿ.ಎಂ.,** ಮಂಗಳೂರು | ಸದಸ್ಯರು |
| ೮. | **ಪ್ರೊ. ಮೇಟಿ ಮುದಿಯಪ್ಪ,** ಉಡುಪಿ | ಸದಸ್ಯರು |
| ೯. | **ಡಾ. ಶ್ರೀನಿಧಿ ಎಂ.ಬಿ.,** ಶಿವಮೊಗ್ಗ | ಸದಸ್ಯರು |
| ೧೦. | **ವಿದ್ವಾನ್ ಎಚ್. ಸತ್ಯನಾರಾಯಣ ರಾವ್,** ಪ್ರಾಚಾರ್ಯರು, ಬೆಂಗಳೂರು | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| | |
|---|---|
| **ವಿಷಯ ಸಂಖ್ಯೆ 01** | **'ಸಂಶೋಧನಾ ಕೇಂದ್ರ' ಮಾನ್ಯತೆಯನ್ನು ನೀಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಸಂಶೋಧನ ಕೇಂದ್ರ'ದ ಮಾನ್ಯತೆಯನ್ನು ನೀಡುವಂತೆ ರಾಜ್ಯದ ಹಲವು ಸಂಸ್ಥೆಗಳು ವಿಶ್ವವಿದ್ಯಾಲಯಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಿದ್ದವು. ಈ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಸಂಶೋಧನ ಕೇಂದ್ರದ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿತ್ತು. ಪರಿಶೀಲನಾ ಸಮಿತಿಗಳು ಸಂಸ್ಥೆಗಳಿಗೆ ಭೇಟಿ ನೀಡಿ, ಭೌತಿಕ ಪರಿಶೀಲನೆಯನ್ನು ನಡೆಸಿ ವಿಶ್ವವಿದ್ಯಾಲಯಕ್ಕೆ ವರದಿಗಳನ್ನು ಸಲ್ಲಿಸಿರುತ್ತವೆ. ಪರಿಶೀಲನಾ ಸಮಿತಿಗಳ ಶಿಫಾರಸ್ಸಿನನ್ವಯ ಈ ಕೆಳಕಂಡ ಸಂಸ್ಥೆಗಳಿಗೆ 2021–22ನೇ ಸಾಲಿನಿಂದ 'ಸಂಶೋಧನಾ ಕೇಂದ್ರ' ಮಾನ್ಯತೆಯನ್ನು ನೀಡಲಾಗಿದೆ. ಪ್ರಶಿಕ್ಷಣ ಪರಿಷತ್ತಿನ ಘಟನೋತ್ತರ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |

| | |
|---|---|
| | 1. ಶ್ರೀ ಮಾಧ್ವ ವಿದ್ಯಾಪೀಠ, ಕೆಲಗೇರಿ ರಸ್ತೆ, ಧಾರವಾಡ.<br>2. ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ಸಂಸ್ಕೃತ ಸಂಶೋಧನ ಕೇಂದ್ರ, ಜೆ.ಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಆವರಣ, ಊಟಿ ರಸ್ತೆ, ಮೈಸೂರು.<br>3. ಶ್ರೀ ವಿಶ್ವೇಶತೀರ್ಥ ಸಂಶೋಧನ ಕೇಂದ್ರ, ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು.<br>4. ಶ್ರೀ ಸತ್ಯಧ್ಯಾನ ಸಂಶೋಧನ ಕೇಂದ್ರ, ವಿದ್ಯಾಗಿರಿ ಹತ್ತಿರ, ಗಾಂಧಿನಗರ, ಪಿ.ಬಿ. ರಸ್ತೆ, ಧಾರವಾಡ. |
| ನಿರ್ಣಯ | **ಅನುಮೋದಿಸಿತು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಸಂಶೋಧನ ಕೇಂದ್ರ'ದ ಮಾನ್ಯತೆಯ ಸಂಬಂಧ, ಇನ್ನುಮುಂದೆ– ಒಬ್ಬರು ಸಿಂಡಿಕೇಟ್ ಸದಸ್ಯರು, ಒಬ್ಬರು ಪ್ರಶಿಕ್ಷಣ ಪರಿಷತ್ ಸದಸ್ಯರು ಮತ್ತು ಶಿಕ್ಷಣತಜ್ಞರನ್ನು ಒಳಗೊಂಡಂತೆ ಸಮಿತಿಗಳನ್ನು ರಚಿಸಲು ಸಭೆಯು ಸೂಚಿಸಿತು.** |
| ವಿಷಯ ಸಂಖ್ಯೆ 02 | **ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು, ಉಮ್ಮಚಗಿ –ಈ ಕಾಲೇಜಿನ ಜ್ಯೋತಿಷ್ಯಶಾಸ್ತ್ರ ಬಿ.ಎ. ಮತ್ತು ಎಂ.ಎ. ತರಗತಿಗಳಿಗೆ ಮಾನ್ಯತೆ ನವೀಕರಿಸುವ ಬಗೆಗೆ.** |
| **ಟಿಪ್ಪಣಿ** | ಈ ಕಾಲೇಜಿಗೆ ಜ್ಯೋತಿಷ್ಯ/ತರ್ಕ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸಹಾಯಕ ಪ್ರಾಧ್ಯಾಪಕ ಹುದ್ದೆಯು ಮಂಜೂರಾಗಿದ್ದು ಜ್ಯೋತಿಷ್ಯ ಸಾಮಾನ್ಯ ಕೋರ್ಸಿಗೆ ಆ ಹುದ್ದೆಯನ್ನು ತುಂಬಲಾಗಿರುತ್ತದೆ. ಈ ಕಾಲೇಜಿಗೆ ಜ್ಯೋತಿಷ್ಯ ಬಿ.ಎ. ಮತ್ತು ಎಂ.ಎ. ತರಗತಿಗಳಿಗೆ ಅನುದಾನರಹಿತವಾಗಿ 2015–16 ರಿಂದ 2019–20ರ ವರೆಗೆ ಮಾನ್ಯತೆ ನೀಡಲಾಗಿರುತ್ತದೆ. ಸದರಿ ಕಾಲೇಜಿನವರು ಅರ್ಜಿ ನೀಡಿ 2020–21 ಸಾಲಿನಿಂದ ಮಾನ್ಯತೆ ನವೀಕರಣಕ್ಕಾಗಿ ಕೋರಿರುತ್ತಾರೆ. ಅವರ ಅರ್ಜಿ ಮತ್ತು 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕಾಲೇಜು/ಸಂಸ್ಥೆಗಳ ಮಾನ್ಯತಾ ನಿಯಮಾವಳಿ, 2019'ರ ನಿಯಮ ಸಂಖ್ಯೆ 4.8ರಂತೆ 'ಸ್ಥಳೀಯ ಪರಿಶೀಲನಾ ಸಮಿತಿ'ಯನ್ನು ರಚಿಸಲಾಗಿತ್ತು. ಸದಸ್ಯರ ವಿವರ ಈ ಕೆಳಗಿನಂತಿದೆ.<br>1. ಪ್ರೊ. ಟಿ.ಎನ್. ಪ್ರಭಾಕರ, ಪ್ರಶಾಸನ ಸಮಿತಿ ಸದಸ್ಯರು, — ಅಧ್ಯಕ್ಷರು<br>2. ಪ್ರೊ. ಶಿವಾನಿ ವಿ., ಡೀನ್, ಶಾಸ್ತ್ರನಿಕಾಯ — ಸದಸ್ಯರು<br>3. ಡಾ. ಮಂಜುನಾಥ ಭಟ್ಟ, ಸಹಾಯಕ ಪ್ರಾಧ್ಯಾಪಕರು, — ಸದಸ್ಯರು<br>4. ವಿದ್ವಾನ್ ಶಿವಮೂರ್ತಿ ಎಂ., ಸಹಾಯಕ ಕುಲಸಚಿವರು — ಸದಸ್ಯ ಕಾರ್ಯದರ್ಶಿ<br>ಈ ಸಮಿತಿಯು ಸದರಿ ಕಾಲೇಜಿಗೆ ಭೇಟಿ ನೀಡಿ, ತನ್ನ ವರದಿಯನ್ನು ಸಲ್ಲಿಸಿದೆ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಈ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಸಭೆಯು ಸ್ಥಳೀಯ ಪರಿಶೀಲನಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿತು. ಈ ಕಾಲೇಜಿನ ಜ್ಯೋತಿಷ್ಯಶಾಸ್ತ್ರ ಬಿ.ಎ. ಮತ್ತು ಎಂ.ಎ. ತರಗತಿಗಳಿಗೆ ಅನುದಾನರಹಿತವಾಗಿ ಮಾನ್ಯತೆ ನವೀಕರಿಸುವುದಕ್ಕೆ ಸಭೆಯು ಒಪ್ಪಿಗೆ ನೀಡಿತು.** |
| ವಿಷಯ ಸಂಖ್ಯೆ 3 | **ಶ್ರೀ ಬಸವೇಶ್ವರ ಸಂಸ್ಕೃತ ಕಾಲೇಜಿನ ಬಿ.ಎ. ಅಲಂಕಾರಶಾಸ್ತ್ರಕ್ಕೆ ಶಾಶ್ವತ ಮಾನ್ಯತೆ ಮತ್ತು ಶಕ್ತಿವಿಶಿಷ್ಟಾದ್ವೈತ ಬಿ.ಎ. ಕೋರ್ಸಿಗೆ ಅನುಮತಿ ನೀಡುವ ಬಗೆಗೆ.** |
| **ಟಿಪ್ಪಣಿ** | ಪ್ರಶಾಸನ ಸಮಿತಿ 57ನೇ ಸಭೆಯ ನಿರ್ಣಯದಂತೆ ಶ್ರೀ ಬಸವೇಶ್ವರ ಸಂಸ್ಕೃತ ಕಾಲೇಜು, ನೆಲಮಂಗಲ –ಈ ಕಾಲೇಜಿನ ಬಿ.ಎ. ಅಲಂಕಾರಶಾಸ್ತ್ರಕ್ಕೆ ಶಾಶ್ವತ ಮಾನ್ಯತೆ ಮತ್ತು ಶಕ್ತಿವಿಶಿಷ್ಟಾದ್ವೈತ ಬಿ.ಎ. ಕೋರ್ಸನ್ನು ಪ್ರಾರಂಭಿಸಲು ಅನುಮತಿ ನೀಡುವ ಸಂಬಂಧ 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕಾಲೇಜು/ಸಂಸ್ಥೆಗಳ ಮಾನ್ಯತಾ ನಿಯಮಾವಳಿ, 2019'ರ ನಿಯಮ ಸಂಖ್ಯೆ 4.8ರಂತೆ 'ಸ್ಥಳೀಯ ಪರಿಶೀಲನಾ ಸಮಿತಿ'ಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ತನ್ನ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ, ಶಕ್ತಿವಿಶಿಷ್ಟಾದ್ವೈತ ಬಿ.ಎ. ಕೋರ್ಸನ್ನು ಪ್ರಾರಂಭಿಸಲು ಅನುಮತಿ ನೀಡಲು ಮತ್ತು ಬಿ.ಎ. ಅಲಂಕಾರಶಾಸ್ತ್ರಕ್ಕೆ 2021–2025 ಅವಧಿಗೆ ಶಾಶ್ವತ ಮಾನ್ಯತೆ ನೀಡಲು ಶಿಫಾರಸ್ಸು ಮಾಡಿರುತ್ತದೆ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಈ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು. ಯುಜಿಸಿ ನಿಯಮಾವಳಿಯನ್ವಯ ವಿದ್ಯಾರ್ಹತೆಯನ್ನು ಹೊಂದಿರುವ ಅರ್ಹ ಬೋಧಕರನ್ನು ನೇಮಿಸಿಕೊಳ್ಳುವಂತೆ ಸಭೆಯು ತೀರ್ಮಾನಿಸಿತು.** |
| ವಿಷಯ ಸಂಖ್ಯೆ 4 | **ವೇದವಿಜ್ಞಾನ ಶೋಧ ಸಂಸ್ಥಾನ ಸಂಸ್ಕೃತ ಕಾಲೇಜು, ಬೆಂಗಳೂರು –ಈ ಕಾಲೇಜಿನಲ್ಲಿ 'ಬಿ.ಎ.–ಸಾಂಖ್ಯಯೋಗ' ಕೋರ್ಸನ್ನು ಪ್ರಾರಂಭಿಸಲು ಅನುಮತಿಯನ್ನು ನೀಡುವ ಬಗೆಗೆ.** |
| **ಟಿಪ್ಪಣಿ** | ವೇದವಿಜ್ಞಾನ ಶೋಧ ಸಂಸ್ಥಾನ ಸಂಸ್ಕೃತ ಕಾಲೇಜು, ಚನ್ನೇನಹಳ್ಳಿ, ಬೆಂಗಳೂರು –ಇವರು 2021–22ರಿಂದ ಬಿ.ಎ. ಸಾಂಖ್ಯಯೋಗ ಕೋರ್ಸನ್ನು ಪ್ರಾರಂಭಿಸಲು ಅನುಮತಿ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕಾಲೇಜು/ಸಂಸ್ಥೆಗಳ ಮಾನ್ಯತಾ ನಿಯಮಾವಳಿ, |

| | |
|---|---|
| | 2019'ರ ನಿಯಮ ಸಂಖ್ಯೆ 4.8ರಂತೆ 'ಸ್ಥಳೀಯ ಪರಿಶೀಲನಾ ಸಮಿತಿ'ಯನ್ನು ರಚಿಸಲಾಗಿತ್ತು. ಸದಸ್ಯರ ವಿವರ ಈ ಕೆಳಗಿನಂತಿದೆ.<br>1. ಪ್ರೊ. ವೀರನಾರಾಯಣ ಪಾಂಡುರಂಗಿ, ಡೀನ್, ವೇದಾಂತ ನಿಕಾಯ, ಅಧ್ಯಕ್ಷರು<br>2. ಡಾ. ಕೃಷ್ಣ ವಿ. ಜೋಷಿ, ಸಂಚಾಲಕರು, ಸಿಡಿಸಿ. ಸದಸ್ಯರು<br>3. ಡಾ. ವೆಂಕಟೇಶ ವಿ, ಸಹಾಯ ಕುಲಸಚಿವರು ಸದಸ್ಯರು<br>4. ಡಾ. ಶಕುಂತಲಾ ಭಟ್, ಯೋಜನಾ ಸಹಾಯಕರು ಸಂಚಾಲಕರು<br>ಈ ಸಮಿತಿಯು ಸದರಿ ಕಾಲೇಜಿಗೆ ಭೇಟಿ ನೀಡಿ, ತನ್ನ ಪರಿಶೀಲನಾ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದೆ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಈ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು.** |
| ವಿಷಯ ಸಂಖ್ಯೆ 05 | **'ಪಿಎಚ್.ಡಿ.–ವಿದ್ಯಾವಾರಿಧಿ' ಅಧ್ಯಯನಕ್ಕೆ ಮಾರ್ಗದರ್ಶಕರನ್ನು ನಿಯೋಜಿಸುವ ಬಗೆಗೆ.** |
| ಟಿಪ್ಪಣಿ | 'ಪಿಎಚ್.ಡಿ.–ವಿದ್ಯಾವಾರಿಧಿ' ಅಧ್ಯಯನ ಮಾಡುವ ಅಭ್ಯರ್ಥಿಗಳಿಗೆ ಮಾರ್ಗದರ್ಶಕರನ್ನಾಗಿ ನಿಯೋಜಿಸುವಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಸಂಯೋಜಿತ ಸಂಸ್ಕೃತ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರ ಆವೇದನೆಯನ್ನು ಸಲ್ಲಿಸಿರುತ್ತಾರೆ. 'ಆಂತರಿಕ ಅಧ್ಯಯನ ಮಂಡಳಿ' ಸಭೆಯ ತೀರ್ಮಾನದಂತೆ, ಯುಜಿಸಿ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನಿಯಮಾವಳಿಗಳಿಗೆ ಅನುಗುಣವಾಗಿ ಅರ್ಹ ಅಧ್ಯಾಪಕರನ್ನು 'ಪಿಎಚ್.ಡಿ.–ವಿದ್ಯಾವಾರಿಧಿ' ಅಧ್ಯಯನದ ಮಾರ್ಗದರ್ಶಕರನ್ನಾಗಿ ನಿಯೋಜಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಯುಜಿಸಿ/ವಿಶ್ವವಿದ್ಯಾಲಯದ ನಿಯಮಾವಳಿಗಳನ್ವಯ ಅರ್ಹತೆ ಹೊಂದಿರುವವರನ್ನು ಮಾರ್ಗದರ್ಶಕರನ್ನಾಗಿ ನಿಯೋಜಿಸಲು ಸಭೆಯು ಅನುಮೋದಿಸಿತು. ಮಾರ್ಗದರ್ಶಕರಾಗಲು ಅರ್ಜಿ ಸಲ್ಲಿಸಿರುವ ಇತರ ಅಧ್ಯಾಪಕರಲ್ಲಿ, ಅರ್ಹತೆ ಹೊಂದಿರುವವರನ್ನು 'ಸ್ಥಾಯಿ ಸಮಿತಿ'ಯಲ್ಲಿ ಅನುಮೋದಿಸಿ ನಿಯೋಜಿಸುವಂತೆ ತೀರ್ಮಾನಿಸಿತು.** |
| ವಿಷಯ ಸಂಖ್ಯೆ 06 | **LMS (Learning Management System) ಅಳವಡಿಸಿಕೊಂಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.** |
| ಟಿಪ್ಪಣಿ | LMS (Learning Management System) ಆಧಾರಿತ ಡಿಜಿಟಲ್ ಕಲಿಕೆಯು ವಿಷಯ ಸಂವಹನ, ಲಭ್ಯತೆ ಮತ್ತು ಮೌಲ್ಯಮಾಪನಗಳಲ್ಲಿ ಪರಿವರ್ತಕ ಬದಲಾವಣೆಗಳನ್ನು ತರುವ ಮೂಲಕ ಬೋಧನೆ–ಕಲಿಕೆಗಳಲ್ಲಿ ಕ್ರಾಂತಿ ಮೂಡಿಸುವ ಸಮಗ್ರ ವೇದಿಕೆಯಾಗಿದೆ. ಇದು ಅಧ್ಯಾಪಕರನ್ನು ಸಶಕ್ತಗೊಳಿಸುವ, ವಿದ್ಯಾರ್ಥಿಗಳನ್ನು ಸಮೃದ್ಧಗೊಳಿಸುವ ಮತ್ತು ಡಿಜಿಟಲ್ ಅಂತರವನ್ನು ಅಳಿಸಿಹಾಕುವ ಅತ್ಯುತ್ತಮ ವ್ಯವಸ್ಥೆಯಾಗಿದೆ. ಇದು ಎಲ್ಲರಿಗೂ ಅಪೇಕ್ಷಿತ ಸಮಯ ಮತ್ತು ಸ್ಥಳಗಳಲ್ಲಿ ಜ್ಞಾನಾರ್ಜನೆಯ ಶಕ್ತಿಯನ್ನು ನೀಡುತ್ತದೆ. ಎಲ್.ಎಂ.ಎಸ್.ಅನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳಲಾಗಿದ್ದು, ಇದನ್ನು ಯುಜಿಸಿಯ INFLIBNET Centre ಸರ್ವರ್ ಮೂಲಕ ಹೋಸ್ಟ್ ಮಾಡಲಾಗುತ್ತಿದೆ. ಹೋಸ್ಟಿಂಗ್ ಚಾರ್ಜಸ್ ಒಂದು ತಿಂಗಳಿಗೆ ರೂ. 5,000/–(+ ಜಿಎಸ್‌ಟಿ)ಗಳನ್ನು INFLIBNET Centre ಪಾವತಿಸಬೇಕಾಗಿರುತ್ತದೆ. ಈ ವಿಷಯವನ್ನು ಪ್ರಶಿಕ್ಷಣ ಪರಿಷತ್ತಿನ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು.** |
| ವಿಷಯ ಸಂಖ್ಯೆ 07 | **MOOC ಕೋರ್ಸ್‌ಗಳನ್ನು ನಡೆಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವ್ಯಾಕರಣ ವಿಭಾಗವು Functional Sanskrit, Training Program on Online attendance and MCQ formation for faculty ಮತ್ತು Basic Computer Training ಸೇರಿದಂತೆ ವಿವಿಧ MOOC ಕೋರ್ಸ್‌ಗಳನ್ನು ನಡೆಸಲು ಕ್ರಮವಹಿಸುತ್ತಿದೆ. ಈ ಕೋರ್ಸ್‌ಗಳನ್ನು ಪ್ರಾರಂಭಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು. ಇತರೆ ವಿಭಾಗಗಳಲ್ಲೂ ಸಹ MOOC ಕೋರ್ಸ್‌ಗಳನ್ನು ಪ್ರಾರಂಭಿಸಲು ಸಭೆಯು ಸೂಚಿಸಿತು.** |
| ವಿಷಯ ಸಂಖ್ಯೆ 08 | **2021–22ನೇ ಸಾಲಿನಲ್ಲಿ ವಿವಿಧ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸುವ ಬಗೆಗೆ.** |
| ಟಿಪ್ಪಣಿ | • ಶಾಸ್ತ್ರನಿಕಾಯವು 2021–22ನೇ ಶೈಕ್ಷಣಿಕ ಸಾಲಿನಲ್ಲಿ ನಾಟ್ಯಶಾಸ್ತ್ರದ ಪಠ್ಯವನ್ನು ಕುರಿತು 'Science of Natya' |

| | |
|---|---|
| | (ನಾಟ್ಯಶಾಸ್ತ್ರಾನುಸಂಧಾನಮ್) ಸರ್ಟಿಫಿಕೇಟ್ ಕೋರ್ಸ್‌ಅನ್ನು ನಡೆಸಲು ಕ್ರಮವಹಿಸುತ್ತಿದೆ. ಈ ಕೋರ್ಸ್ ಒಟ್ಟು ನಾಲ್ಕು ಹಂತಗಳದ್ದಾಗಿದ್ದು, ಪ್ರತಿ ಹಂತವು 3 ತಿಂಗಳು ಅಥವಾ 60 ಗಂಟೆ ಅವಧಿಯದ್ದಾಗಿದೆ. ನಾಲ್ಕೂ ಹಂತಗಳನ್ನು ಪೂರೈಸಿದ ವಿದ್ಯಾರ್ಥಿಗಳಿಗೆ ಪಿ.ಜಿ. ಡಿಪ್ಲೋಮಾ ಸರ್ಟಿಫಿಕೇಟ್‌ಅನ್ನು ನೀಡಲಾಗುವುದು. ಈ ಕೋರ್ಸ್‌ನ ಶುಲ್ಕವನ್ನು ವಿದ್ಯಾರ್ಥಿಗಳಿಗೆ ರೂ. 6,000/- ಹಾಗೂ ವೃತ್ತಿನಿರತರಿಗೆ ರೂ. 10,000/- (ಅಂತಾರಾಷ್ಟ್ರೀಯರಿಗೆ: ವಿದ್ಯಾರ್ಥಿಗಳಿಗೆ 120$; ವೃತ್ತಿನಿರತರಿಗೆ 150$) ನಿಗದಿಗೊಳಿಸಲಾಗಿದೆ.<br>• ವ್ಯಾಕರಣ ವಿಭಾಗವು 2021–22ನೇ ಶೈಕ್ಷಣಿಕ ಸಾಲಿನಲ್ಲಿ 'ಶತಶ್ಲೋಕೇನ ಪಂಡಿತಃ' ವಿಷಯವನ್ನು ಕುರಿತು ಸರ್ಟಿಫಿಕೇಟ್ ಕೋರ್ಸ್‌ಅನ್ನು ನಡೆಸಲು ಕ್ರಮವಹಿಸುತ್ತಿದೆ. ಈ ಕೋರ್ಸ್‌ನ ಒಟ್ಟು ಅವಧಿಯು 3 ತಿಂಗಳು. ಕೋರ್ಸ್‌ನ ಶುಲ್ಕವನ್ನು ವಿದ್ಯಾರ್ಥಿಗಳಿಗೆ ರೂ. 3,000/-, ವೃತ್ತಿನಿರತರಿಗೆ ರೂ. 4,000/- ಹಾಗೂ ವಿದೇಶೀಯರಿಗೆ 100$ ಗಳನ್ನು ನಿಗದಿಪಡಿಸಲಾಗಿದೆ.<br>• ನ್ಯಾಯ ಮತ್ತು ವೈಶೇಷಿಕ ವಿಭಾಗವು ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರಿಗಾಗಿ 2021–22ನೇ ಶೈಕ್ಷಣಿಕ ಸಾಲಿನಲ್ಲಿ 'Graphical representation of Shastrabhasa' ವಿಷಯವನ್ನು ಕುರಿತು ಸರ್ಟಿಫಿಕೇಟ್ ಕೋರ್ಸ್ ನಡೆಸಲು ಕ್ರಮವಹಿಸುತ್ತಿದೆ. ಈ ಕೋರ್ಸ್ ಆನ್‌ಲೈನ್ ಮಾಧ್ಯಮದಲ್ಲಿ ನಡೆಯಲಿದ್ದು, ಕೋರ್ಸ್‌ನ ಒಟ್ಟು ಅವಧಿಯು 45 ಗಂಟೆಗಳದ್ದಾಗಿದೆ. ಕೋರ್ಸ್‌ನ ಶುಲ್ಕವನ್ನು ವಿದ್ಯಾರ್ಥಿಗಳಿಗೆ ರೂ. 2,000/- ಮತ್ತು ವೃತ್ತಿನಿರತರಿಗೆ ರೂ. 3,000/- ನಿಗದಿಪಡಿಸಲಾಗಿದೆ.<br>ಈ ಕೋರ್ಸ್‌ಗಳನ್ನು ನಡೆಸುವುದಕ್ಕೆ ಪ್ರಶಿಕ್ಷಣ ಪರಿಷತ್‌ನ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು. 'ಹಣಕಾಸು ಸಮಿತಿ'ಯ ನಿರ್ಣಯದಂತೆ ಈ ಕೋರ್ಸಿನ ಬೋಧಕರಿಗೆ ಗೌರವಧನವನ್ನು ನಿಗದಿಪಡಿಸಿಕೊಳ್ಳಲು ಸಭೆಯು ಸೂಚಿಸಿತು.** |
| **ವಿಷಯ ಸಂಖ್ಯೆ 09** | **ಇ-ಬುಕ್ಸ್ ಮತ್ತು ಇ-ಜರ್ನಲ್ ಪ್ರಕಟಿಸುವ ಬಗೆಗೆ.** |
| **ಟಿಪ್ಪಣಿ** | ವ್ಯಾಕರಣ ವಿಭಾಗವು ವ್ಯಾಕರಣ ವಿಷಯಗಳಿಗೆ ಸಂಬಂಧಪಟ್ಟಂತೆ ರಚಿತವಾದ ಗ್ರಂಥಗಳನ್ನು ಇ–ಬುಕ್ಸ್(e-Books)ಗಳಾಗಿ ಪ್ರಕಟಿಸಲು ಕ್ರಮವಹಿಸುತ್ತಿದೆ. ಇದರ ಜೊತೆಗೆ ವ್ಯಾಕರಣ ವಿಷಯಕ್ಕೆ ಸಂಬಂಧಪಟ್ಟ ಸಂಶೋಧನಾ ಲೇಖನಗಳ ಪ್ರಕಟಣೆಗಾಗಿ ಇ–ಜರ್ನಲ್ (e-Journal)ಅನ್ನು ಪ್ರಕಟಿಸಲು ಕ್ರಮವಹಿಸುತ್ತಿದೆ. ಈ ವಿಷಯವನ್ನು ಪ್ರಶಿಕ್ಷಣ ಪರಿಷತ್‌ನ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳಿಂದಲೂ ಪ್ರಕಟಣೆಗಳನ್ನು ಹೊರತರಲು ಸೂಚಿಸಿ ಸಭೆಯು ಅನುಮೋದಿಸಿತು.** |
| **ವಿಷಯ ಸಂಖ್ಯೆ 10** | **ಶಾಸ್ತ್ರನಿಕಾಯದ ಅಡಿಯಲ್ಲಿ 'ಸಾಂಖ್ಯ ಮತ್ತು ಯೋಗ ವಿಭಾಗ'ವನ್ನು ಸ್ಥಾಪಿಸಿರುವ ಬಗೆಗೆ.** |
| **ಟಿಪ್ಪಣಿ** | 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009'ರ ಅಧ್ಯಾಯ: VII; ಅನುಚ್ಛೇದ 49(III)ರ ಅವಕಾಶಗಳ ಮೇರೆಗೆ ಶಾಸ್ತ್ರ ನಿಕಾಯದ ಅಡಿಯಲ್ಲಿ 'ಸಾಂಖ್ಯ ಮತ್ತು ಯೋಗ ವಿಭಾಗ'ವನ್ನು ಸ್ಥಾಪಿಸಲು ಅನುಮತಿಯನ್ನು ಕೋರಿ ಪ್ರಶಿಕ್ಷಣ ಪರಿಷತ್‌ನ 31ನೇ ಸಭೆಯಲ್ಲಿ ವಿಷಯವನ್ನು ಮಂಡಿಸಲಾಗಿತ್ತು. ಈ ವಿಷಯವನ್ನು ಚರ್ಚಿಸಲು ಸಮಿತಿಯೊಂದನ್ನು ರಚಿಸುವಂತೆ ಸದಸ್ಯರನ್ನು ಸೂಚಿಸಿತ್ತು ಹಾಗೂ ಈ ಸಮಿತಿಯ ನಿರ್ಣಯವನ್ನು ಡೀನ್ಸ್ ಕೌನ್ಸಿಲ್‌ನಲ್ಲಿ ಮಂಡಿಸುವಂತೆ ಪ್ರಶಿಕ್ಷಣ ಪರಿಷತ್ ನಿರ್ಣಯಿಸಿತ್ತು. ಪ್ರಶಿಕ್ಷಣ ಪರಿಷತ್‌ನ ನಿರ್ಣಯದಂತೆ ಸಮಿತಿಯನ್ನು ರಚಿಸಲಾಗಿತ್ತು ಮತ್ತು ಈ ಸಮಿತಿಯು ದಿನಾಂಕ: 18.11.2021ರಂದು ಸಭೆಯು ನಡೆಯಿತು. ವಿಶ್ವವಿದ್ಯಾಲಯದ ಡೀನ್ಸ್ ಕೌನ್ಸಿಲ್ ಸಭೆಯು ದಿನಾಂಕ: 28.01.2022ರಂದು ನಡೆಯಿತು. ಈ ಎರಡೂ ಸಭೆಗಳ ನಡಾವಳಿಯನ್ನು ಪ್ರಶಿಕ್ಷಣ ಪರಿಷತ್‌ನ ಅವಗಾಹನೆಗಾಗಿ ಮುಂದಿನ ಕ್ರಮಗಳನ್ನು ಕೈಗೊಳ್ಳಲು ಅನುಮತಿಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **2022–23ನೇ ಸಾಲಿನ ಶೈಕ್ಷಣಿಕ ವರ್ಷದಿಂದಲೇ 'ಸಾಂಖ್ಯ ಮತ್ತು ಯೋಗ ವಿಭಾಗ'ವನ್ನು ಪ್ರಾರಂಭಿಸುವಂತೆ ಸೂಚಿಸಿ ಅನುಮೋದಿಸಿತು.** |
| **ವಿಷಯ ಸಂಖ್ಯೆ 11** | **ಶಾಸ್ತ್ರನಿಕಾಯದ ಅಡಿಯಲ್ಲಿ 'ಬಿ.ಎ.–ಶಾಸ್ತ್ರ' ಪದವಿಯನ್ನು ಪ್ರಾರಂಭಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಭಾರತ ಸರ್ಕಾರದ 'ರಾಷ್ಟ್ರೀಯ ಶಿಕ್ಷಣ ನೀತಿ–2020'ಅನ್ನು 2021–22ನೇ |

| | |
|---|---|
| | ಶೈಕ್ಷಣಿಕ ಸಾಲಿನಿಂದ ಅಳವಡಿಸಿಕೊಂಡಿದೆ. ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ ವಿಶ್ವವಿದ್ಯಾಲಯದಲ್ಲಿ ಬಿ.ಎ. ಪದವಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ, 2021–22ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾಲಯದ ಶಾಸ್ತ್ರನಿಕಾಯದಡಿಯಲ್ಲಿ ಬಿ.ಎ.–ಶಾಸ್ತ್ರ ಪದವಿಯನ್ನು ಪ್ರಾರಂಭಿಸಲಾಗಿದೆ. ಈ ಪದವಿಗೆ ಸಂಬಂಧಿಸಿದಂತೆ ಅಧ್ಯಯನ ಮಂಡಳಿಯು ಹೊಸದಾಗಿ ಪಠ್ಯಕ್ರಮವನ್ನು ಸಿದ್ಧಪಡಿಸಿದೆ. ಈ ವಿಷಯವನ್ನು ಪ್ರಶಿಕ್ಷಣ ಪರಿಷತ್‌ನ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು. ಈ ಕೋರ್ಸನ್ನು ಪ್ರಾರಂಭಿಸಿರುವುದಕ್ಕೆ ಸಂಬಂಧಿಸಿದಂತೆ ಎಲ್ಲಾ ನಿಯಮಗಳನ್ನು ಪಾಲಿಸಿರುವುದರ ಬಗೆಗೆ 'ಡೀನ್ಸ್ ಕೌನ್ಸಿಲ್' ಸಭೆಯಲ್ಲಿ ದೃಢೀಕರಿಸಿಕೊಳ್ಳುವಂತೆ ಸಭೆಯು ಸೂಚಿಸಿತು.** |
| **ವಿಷಯ ಸಂಖ್ಯೆ 12** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳು ಯುಜಿಸಿಯ 2(ಎಫ್) ಮತ್ತು 12(ಬಿ) ಮಾನ್ಯತೆ ಪಡೆದುಕೊಳ್ಳುವ ಬಗೆಗೆ.** |
| **ಟಿಪ್ಪಣಿ** | ಸ್ನಾತಕೋತ್ತರ ಪದವಿಗಳನ್ನು ನಡೆಸುತ್ತಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯೋಜಿತ ಸಂಸ್ಕೃತ ಕಾಲೇಜುಗಳು ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ)ದ 2(ಎಫ್) ಮತ್ತು 12(ಬಿ) ಮಾನ್ಯತೆಯನ್ನು ಪಡೆದುಕೊಳ್ಳಬೇಕಾಗಿರುತ್ತದೆ. ಸ್ನಾತಕೋತ್ತರ ಪದವಿಗಳನ್ನು ನಡೆಸುತ್ತಿರುವ ಕಾಲೇಜುಗಳಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶವನ್ನು ಸ್ಥಾಪಿಸಿ, ಈ ಕೋಶಕ್ಕೆ ಸಂಯೋಜಕರನ್ನು ನೇಮಿಸುವಂತೆ ಕಾಲೇಜುಗಳಿಗೆ ಸೂಚಿಸಲಾಗಿದೆ. 2(ಎಫ್) ಮತ್ತು 12(ಬಿ) ಮಾನ್ಯತೆಯನ್ನು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಕಾಲೇಜುಗಳಿಗೆ ಅಗತ್ಯ ತರಬೇತಿಗಳನ್ನು ನೀಡಬೇಕಾದ ಹಿನ್ನೆಲೆಯಲ್ಲಿ, ಸಂಯೋಜಿತ ಕಾಲೇಜುಗಳ ಐ.ಕ್ಯು.ಎ.ಸಿ. ಸಂಯೋಜಕರಿಗೆ ತರಬೇತಿ ಕಾರ್ಯಾಗಾರವನ್ನು ನಡೆಸಲು ಕ್ರಮವಹಿಸಲಾಗುತ್ತಿದೆ. ಪ್ರಶಿಕ್ಷಣ ಪರಿಷತ್‌ನ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು.** |
| **ವಿಷಯ ಸಂಖ್ಯೆ 13** | **ಸ್ನಾತಕ–ಸ್ನಾತಕೋತ್ತರ ಪದವಿಗಳಲ್ಲಿನ ಐಚ್ಛಿಕ ವಿಷಯಗಳಿಗೆ (Optional Subjects) Credit Banking & Credit Transfer ಸೌಲಭ್ಯವನ್ನು ನೀಡುವ ಬಗೆಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2018–19ನೇ ಶೈಕ್ಷಣಿಕ ಸಾಲಿನಿಂದ ಸಿಬಿಸಿಎಸ್ (Choice Based Credit System) ಮತ್ತು 2021–22ನೇ ಶೈಕ್ಷಣಿಕ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ–2020ಅನ್ನು ಅಳವಡಿಸಿಕೊಂಡಿರುತ್ತದೆ. ಅದರಂತೆ, ಸ್ನಾತಕ–ಸ್ನಾತಕೋತ್ತರ ಪದವಿಗಳಲ್ಲಿನ ಐಚ್ಛಿಕ ವಿಷಯಗಳಿಗೆ (Optional Subjects) Credit Banking & Credit Transfer ಸೌಲಭ್ಯವನ್ನು ನೀಡಬೇಕಾಗಿದ್ದು, ಪ್ರಶಿಕ್ಷಣ ಪರಿಷತ್‌ನ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು. ಈ ಸಂಬಂಧ ಕೆಳಕಂಡ ಸದಸ್ಯರನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಲು ಸಭೆಯು ತೀರ್ಮಾನಿಸಿತು.**<br>**1. ಪ್ರೊ. ಶಿವಾನಿ ವಿ., ಡೀನ್, ಶಾಸ್ತ್ರ ನಿಕಾಯ, ಕ.ಸಂ.ವಿ. — ಅಧ್ಯಕ್ಷರು**<br>**2. ಡಾ. ಕೃಷ್ಣ ವಿ ಜೋಷಿ, ಸಂಯೋಜಕರ, ಕಾ.ಅ.ಮಂ., ಕ.ಸಂ.ವಿ. — ಸದಸ್ಯರು**<br>**3. ಡಾ. ವಿನಯ್ ಪಿ., ಸಹಾಯಕ ಪ್ರಾಧ್ಯಾಪಕರು, ಕ.ಸಂ.ವಿ. — ಸದಸ್ಯರು**<br>**4. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ ಒಬ್ಬರು ತಜ್ಞರು — ಸದಸ್ಯರು**<br>**5. ಡಾ. ಎಸ್.ಎಸ್. ನಿರಂಜನಮೂರ್ತಿ, ಪ್ರಾಚಾರ್ಯರು, ಶ್ರೀ ಸಿದ್ಧಲಿಂಗೇಶ್ವರ ವೇದಸಂಸ್ಕೃತ ಕಾಲೇಜು, ತುಮಕೂರು — ಸದಸ್ಯರು**<br>**6. ಡಾ. ಎಸ್. ದಯಾಶಂಕರ್, ಪ್ರಾಚಾರ್ಯರು (ಪ್ರ), ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು — ಸದಸ್ಯರು**<br>**7. ಡಾ. ಮಂಜುನಾಥ ಭಟ್ಟ, ಪರೀಕ್ಷಾ ನಿಯಂತ್ರಕರು, ಕ.ಸಂ.ವಿ. — ಸದಸ್ಯ ಕಾರ್ಯದರ್ಶಿ** |
| **ವಿಷಯ ಸಂಖ್ಯೆ 14** | **ಸಿದ್ಧಾಂತ ನಾಲೆಡ್ಜ್ ಫೌಂಡೇಶನ್ ಸಂಸ್ಥೆಯೊಂದಿಗೆ MoU ಮಾಡಿಕೊಂಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವ್ಯಾಕರಣ ವಿಭಾಗವು ಚೆನ್ನೈನ ಸಿದ್ಧಾಂತ ನಾಲೆಡ್ಜ್ ಫೌಂಡೇಶನ್ ಸಂಸ್ಥೆಯೊಂದಿಗೆ 05 ವರ್ಷಗಳ ಅವಧಿಗೆ MoU ಮಾಡಿಕೊಂಡಿದೆ. ಇದರ ಮುಂದುವರೆದ ಭಾಗವಾಗಿ 'Implementation of the project to produce a detailed 'Shastra-mapping' of the Yogasutram and the Mahabhasyam texts'ಗಾಗಿ ಒಪ್ಪಂದವನ್ನು ಮಾಡಿಕೊಂಡಿದೆ. ಈ ಯೋಜನೆಯು 12 |

| | |
|---|---|
| | ತಿಂಗಳ ಅವಧಿಯದ್ದಾಗಿದ್ದು, ಯೋಜನೆಗಾಗಿ ಸಿದ್ಧಾಂತ ನಾಲೆಡ್ಜ್ ಸಂಸ್ಥೆಯು ವ್ಯಾಕರಣ ವಿಭಾಗಕ್ಕೆ ರೂ. 4,80,000/– ಮತ್ತು ರೂ. 72,000/–ಗಳ ಅನುದಾನವನ್ನು ನೀಡಲಿದೆ. ಈ ಯೋಜನೆಗಾಗಿ ವ್ಯಾಕರಣ ವಿಭಾಗಕ್ಕೆ ಒಬ್ಬರು ಅತಿಥಿ ಉಪನ್ಯಾಸಕರು ಮತ್ತು ಇಬ್ಬರು ಸಂಶೋಧನಾ ವಿದ್ವಾಂಸರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಈ ವಿಷಯವನ್ನು ಪ್ರಶಿಕ್ಷಣ ಪರಿಷತ್‌ನ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು. ಯೋಜನೆಯ ನಿಯಮಾವಳಿಗಳನ್ವಯ ಅತಿಥಿ ಉಪನ್ಯಾಸಕರು ಮತ್ತು ಸಂಶೋಧನಾ ವಿದ್ವಾಂಸರಿಗೆ ವೇತನ ಹಾಗೂ ಭತ್ಯೆಗಳನ್ನು ಈ ಯೋಜನೆಯ ನಿಧಿಯಿಂದಲೇ ಪಾವತಿಸಲು ಸಭೆಯು ತೀರ್ಮಾನಿಸಿತು.** |
| ವಿಷಯ ಸಂಖ್ಯೆ 15 | **ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಸಂಸತ್‌ನಲ್ಲಿ ಭಗವದ್ರಾಮಾನುಜ ದರ್ಶನ ಮತ್ತು ವಾಙ್ಮಯ ಕುರಿತು ಸರ್ಟಿಫಿಕೇಟ್/ಪಿ.ಜಿ. ಡಿಪ್ಲೋಮಾ ಕೋರ್ಸ್ ಪ್ರಾರಂಭಿಸುವ ಬಗೆಗೆ.** |
| ಟಿಪ್ಪಣಿ | ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಸಂಸತ್ ಸರ್ಕಾರದ ಅನುದಾನಿತ ಸಂಸ್ಥೆಯಾಗಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆಯಲ್ಲಿ ಭಗವದ್ರಾಮಾನುಜ ದರ್ಶನ ಮತ್ತು ವಾಙ್ಮಯ ಕುರಿತಾದ ಸರ್ಟಿಫಿಕೇಟ್/ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡುವಂತೆ ಸಂಸ್ಥೆಯ ನಿರ್ದೇಶಕರು ವಿಶ್ವವಿದ್ಯಾಲಯವನ್ನು ಕೋರಿರುತ್ತಾರೆ. ಈ ಸಂಸ್ಥೆಯಲ್ಲಿ ಸರ್ಟಿಫಿಕೇಟ್/ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳನ್ನು ನಿಯಮಾನುಸಾರ ಪ್ರಾರಂಭಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮತಿಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಅನುಮತಿ ನೀಡಿತು.** |
| ವಿಷಯ ಸಂಖ್ಯೆ 16 | **'ಸಮಾಲೋಚನೆ ಮತ್ತು ಯೋಗಚಿಕಿತ್ಸೆ ವಿಭಾಗ'ವನ್ನು ಪ್ರಾರಂಭಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಅಧ್ಯಾಯ: VI; ಅನುಚ್ಛೇದ 49(VI) ರ ಅವಕಾಶಗಳ ಮೇರೆಗೆ 'Faculty of Ancient Indian Sciences'ನ ಅಡಿಯಲ್ಲಿ Dept. of Counseling and Yoga Theraphy (ಸಮಾಲೋಚನೆ ಮತ್ತು ಯೋಗಚಿಕಿತ್ಸೆ ವಿಭಾಗ)ವನ್ನು ಪ್ರಾರಂಭಿಸುವುದಕ್ಕೆ ಸಂಬಂಧಿಸಿದಂತೆ ಡೀನ್ಸ್ ಕೌನ್ಸಿಲ್ ಸಭೆಯಲ್ಲಿ ಈಗಾಗಲೇ ಚರ್ಚಿಸಲಾಗಿದೆ. ಪ್ರಸ್ತುತ ತಾತ್ಕಾಲಿಕವಾಗಿ ನಡೆಯುತ್ತಿದ್ದ ಯೋಗ ಸರ್ಟಿಫಿಕೇಟ್, ಡಿಪ್ಲೋಮಾ ಮತ್ತು ಯೋಗ ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳನ್ನು 'Dept. of Counseling and Yoga Theraphy' ಅಡಿಯಲ್ಲಿ ಮುಂದುವರಿಸಬೇಕಾಗಿದೆ. ಈ ಕೋರ್ಸುಗಳಿಗೆ ಸಂಬಂಧಿಸಿದಂತೆ, ಸಂಸ್ಕೃತ ಭಾಷಾ ಮತ್ತು ಸಾಹಿತ್ಯ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಜಯರೇವಣ್ಣ ಎಂ.ವಿ. ಅವರನ್ನು ಹಾಲಿ ನಿರ್ವಹಿಸುತ್ತಿರುವ ಕರ್ತವ್ಯದೊಂದಿಗೆ, Dept. of Counseling and Yoga Theraphy ವಿಭಾಗದ ಮುಖ್ಯಸ್ಥರಾಗಿ ನೇಮಿಸಲಾಗಿದೆ. ಈ ವಿಷಯವನ್ನು ಪ್ರಶಿಕ್ಷಣ ಪರಿಷತ್‌ನ ಸ್ಥಿರೀಕರಣಕ್ಕಾಗಿ ಮಂಡಿಸಿದೆ. |
| ನಿರ್ಣಯ | **'ಸಮಾಲೋಚನೆ ಮತ್ತು ಯೋಗಚಿಕಿತ್ಸೆ ವಿಭಾಗ'ವನ್ನು ಪ್ರಾರಂಭಿಸುವುದಕ್ಕೆ ಅನುಮತಿ ನೀಡಿತು ಹಾಗೂ ಡಾ. ಜಯರೇವಣ್ಣ ಎಂ.ವಿ. –ಅವರನ್ನು ಸಮಾಲೋಚನೆ ಮತ್ತು ಯೋಗಚಿಕಿತ್ಸೆ ವಿಭಾಗ'ದ ಮುಖ್ಯಸ್ಥರನ್ನಾಗಿ ನೇಮಿಸಿರುವುದನ್ನು ಸಭೆಯು ಸ್ಥಿರೀಕರಿಸಿತು.** |
| ವಿಷಯ ಸಂಖ್ಯೆ 17 | **2020–21ನೇ ಸಾಲಿನ ಜಮಾ–ಖರ್ಚು ತಃಖ್ತೆಗಳನ್ನು ಪರಿಶೀಲಿಸಿ ಆಡಿಟ್ ಮಾಡಿಸಲು ಸಭೆಯ ಅನುಮೋದನೆ ನೀಡುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020–21 ನೇ ಸಾಲಿನ ಜಮಾ ಮತ್ತು ಖರ್ಚಿನ ಲೆಕ್ಕಪತ್ರಗಳು ಅಂತಿಮಗೊಂಡಿದ್ದು ದಿನಾಂಕ: 14.02.2022ರಂದು ನಡೆದ ಹಣಕಾಸು ಸಮಿತಿಯಲ್ಲಿ ಮಂಡಿಸಲಾಗಿತ್ತು. 2020–21ನೇ ಸಾಲಿನ ಲೆಕ್ಕಪರಿಶೋಧನೆ ನಡೆಸಲು ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ಇವರನ್ನು ಆಹ್ವಾನಿಸಲು ಹಣಕಾಸು ಸಮಿತಿಯ ಒಪ್ಪಿಗೆ ನೀಡಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದು ಪ್ರಶಿಕ್ಷಣ ಸಭೆಯ ಅನುಮೋದನೆ ಕೋರಿದೆ. |
| ನಿರ್ಣಯ | **2020–21 ನೇ ಸಾಲಿನ ಜಮಾ ಮತ್ತು ಖರ್ಚಿನ ಪರಿಶಿಲಿಸಿ ಆಡಿಟ್ ಮಾಡಿಸಲು ಸಭೆಯು ಅನುಮೋನೆ ನೀಡಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | |
| ವಿಷಯ ಸಂಖ್ಯೆ 01 | **'ರಾಷ್ಟ್ರೀಯ ಶಿಕ್ಷಣ ನೀತಿ–2020' ಅನುಸಾರ ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಭಾಗದ ಬಿ.ಎ. ಪ್ರಥಮ ಸೆಮಿಸ್ಟರ್ ಪರಿಷ್ಕೃತ ಪಾಠ್ಯಕ್ರಮವನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | 'ರಾಷ್ಟ್ರೀಯ ಶಿಕ್ಷಣ ನೀತಿ–2020' ನಿಯಮಾನುಸಾರ ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಭಾಗದ ಬಿ.ಎ. ಪ್ರಥಮ ಸೆಮಿಸ್ಟರ್‌ನಲ್ಲಿ Minor Core -1, 2 ವಿಷಯದಲ್ಲಿ ಪಾಠ್ಯಕ್ರಮವನ್ನು ಅಳವಡಿಸಲಾಗಿದೆ. ಈ ಪರಿಷ್ಕೃತ ಪಾಠ್ಯಕ್ರಮವನ್ನು ಪ್ರಶಿಕ್ಷಣ ಪರಿಷತ್‌ನ ಅನುಮೋದನೆಗಾಗಿ ಮಂಡಿಸಿದೆ. |

| | |
|---|---|
| ನಿರ್ಣಯ | ಪರಿಷ್ಕೃತ ಪಾಠ್ಯಕ್ರಮವನ್ನು ಪ್ರಶಿಕ್ಷಣ ಪರಿಷತ್‌ನ 'ಸ್ಥಾಯಿ ಸಮಿತಿ'ಯಲ್ಲಿ ಪರಿಶೀಲಿಸಿ, ಅನುಮೋದಿಸುವಂತೆ ಸಭೆಯು ತೀರ್ಮಾನಿಸಲಾಯಿತು. |

ಪ್ರೊ. ವಿ. ಗಿರೀಶ್‌ಚಂದ್ರ
ಕುಲಸಚಿವರು (ಪ್ರ)

ಪ್ರೊ. ಕೆ.ಇ. ದೇವನಾಥನ್
ಕುಲಪತಿಗಳು

| | |
|---|---|
| | ತಿಂಗಳ ಅವಧಿಯದ್ದಾಗಿದ್ದು, ಯೋಜನೆಗಾಗಿ ಸಿದ್ಧಾಂತ ನಾಲೆಡ್ಜ್ ಸಂಸ್ಥೆಯು ವ್ಯಾಕರಣ ವಿಭಾಗಕ್ಕೆ ರೂ. 4,80,000/- ಮತ್ತು ರೂ. 72,000/-ಗಳ ಅನುದಾನವನ್ನು ನೀಡಲಿದೆ. ಈ ಯೋಜನೆಗಾಗಿ ವ್ಯಾಕರಣ ವಿಭಾಗಕ್ಕೆ ಒಬ್ಬರು ಅತಿಥಿ ಉಪನ್ಯಾಸಕರು ಮತ್ತು ಇಬ್ಬರು ಸಂಶೋಧನಾ ವಿದ್ವಾಂಸರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಈ ವಿಷಯವನ್ನು ಪ್ರಶಿಕ್ಷಣ ಪರಿಷತ್‌ನ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು. ಯೋಜನೆಯ ನಿಯಮಾವಳಿಗಳನ್ವಯ ಅತಿಥಿ ಉಪನ್ಯಾಸಕರು ಮತ್ತು ಸಂಶೋಧನಾ ವಿದ್ವಾಂಸರಿಗೆ ವೇತನ ಹಾಗೂ ಭತ್ಯೆಗಳನ್ನು ಈ ಯೋಜನೆಯ ನಿಧಿಯಿಂದಲೇ ಪಾವತಿಸಲು ಸಭೆಯು ತೀರ್ಮಾನಿಸಿತು.** |
| ವಿಷಯ ಸಂಖ್ಯೆ 15 | **ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಸಂಸತ್‌ನಲ್ಲಿ ಭಗವದ್ರಾಮಾನುಜ ದರ್ಶನ ಮತ್ತು ವಾಙ್ಮಯ ಕುರಿತು ಸರ್ಟಿಫಿಕೇಟ್/ಪಿ.ಜಿ. ಡಿಪ್ಲೋಮಾ ಕೋರ್ಸ್ ಪ್ರಾರಂಭಿಸುವ ಬಗೆಗೆ.** |
| ಟಿಪ್ಪಣಿ | ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಸಂಸತ್ ಸರ್ಕಾರದ ಅನುದಾನಿತ ಸಂಸ್ಥೆಯಾಗಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆಯಲ್ಲಿ ಭಗವದ್ರಾಮಾನುಜ ದರ್ಶನ ಮತ್ತು ವಾಙ್ಮಯ ಕುರಿತಾದ ಸರ್ಟಿಫಿಕೇಟ್/ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡುವಂತೆ ಸಂಸ್ಥೆಯ ನಿರ್ದೇಶಕರು ವಿಶ್ವವಿದ್ಯಾಲಯವನ್ನು ಕೋರಿರುತ್ತಾರೆ. ಈ ಸಂಸ್ಥೆಯಲ್ಲಿ ಸರ್ಟಿಫಿಕೇಟ್/ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳನ್ನು ನಿಯಮಾನುಸಾರ ಪ್ರಾರಂಭಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮತಿಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಅನುಮತಿ ನೀಡಿತು.** |
| ವಿಷಯ ಸಂಖ್ಯೆ 16 | **'ಸಮಾಲೋಚನೆ ಮತ್ತು ಯೋಗಚಿಕಿತ್ಸೆ ವಿಭಾಗ'ವನ್ನು ಪ್ರಾರಂಭಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಅಧ್ಯಾಯ: VI; ಅನುಚ್ಛೇದ 49(VI) ರ ಅವಕಾಶಗಳ ಮೇರೆಗೆ 'Faculty of Ancient Indian Sciences'ನ ಅಡಿಯಲ್ಲಿ Dept. of Counseling and Yoga Theraphy (ಸಮಾಲೋಚನೆ ಮತ್ತು ಯೋಗಚಿಕಿತ್ಸೆ ವಿಭಾಗ)ವನ್ನು ಪ್ರಾರಂಭಿಸುವುದಕ್ಕೆ ಸಂಬಂಧಿಸಿದಂತೆ ಡೀನ್ಸ್ ಕೌನ್ಸಿಲ್ ಸಭೆಯಲ್ಲಿ ಈಗಾಗಲೇ ಚರ್ಚಿಸಲಾಗಿದೆ. ಪ್ರಸ್ತುತ ತಾತ್ಕಾಲಿಕವಾಗಿ ನಡೆಯುತ್ತಿದ್ದ ಯೋಗ ಸರ್ಟಿಫಿಕೇಟ್, ಡಿಪ್ಲೋಮಾ ಮತ್ತು ಯೋಗ ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳನ್ನು 'Dept. of Counseling and Yoga Theraphy' ಅಡಿಯಲ್ಲಿ ಮುಂದುವರಿಸಬೇಕಾಗಿದೆ. ಈ ಕೋರ್ಸುಗಳಿಗೆ ಸಂಬಂಧಿಸಿದಂತೆ, ಸಂಸ್ಕೃತ ಭಾಷಾ ಮತ್ತು ಸಾಹಿತ್ಯ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಜಯರೇವಣ್ಣ ಎಂ.ವಿ. ಅವರನ್ನು ಹಾಲಿ ನಿರ್ವಹಿಸುತ್ತಿರುವ ಕರ್ತವ್ಯದೊಂದಿಗೆ, Dept. of Counseling and Yoga Theraphy ವಿಭಾಗದ ಮುಖ್ಯಸ್ಥರಾಗಿ ನೇಮಿಸಲಾಗಿದೆ. ಈ ವಿಷಯವನ್ನು ಪ್ರಶಿಕ್ಷಣ ಪರಿಷತ್‌ನ ಸ್ಥಿರೀಕರಣಕ್ಕಾಗಿ ಮಂಡಿಸಿದೆ. |
| ನಿರ್ಣಯ | **'ಸಮಾಲೋಚನೆ ಮತ್ತು ಯೋಗಚಿಕಿತ್ಸೆ ವಿಭಾಗ'ವನ್ನು ಪ್ರಾರಂಭಿಸುವುದಕ್ಕೆ ಅನುಮತಿ ನೀಡಿತು ಹಾಗೂ ಡಾ. ಜಯರೇವಣ್ಣ ಎಂ.ವಿ. -ಅವರನ್ನು ಸಮಾಲೋಚನೆ ಮತ್ತು ಯೋಗಚಿಕಿತ್ಸೆ ವಿಭಾಗ'ದ ಮುಖ್ಯಸ್ಥರನ್ನಾಗಿ ನೇಮಿಸಿರುವುದನ್ನು ಸಭೆಯು ಸ್ಥಿರೀಕರಿಸಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | |
| ವಿಷಯ ಸಂಖ್ಯೆ 01 | **'ರಾಷ್ಟ್ರೀಯ ಶಿಕ್ಷಣ ನೀತಿ-2020' ಅನುಸಾರ ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಭಾಗದ ಬಿ.ಎ. ಪ್ರಥಮ ಸೆಮಿಸ್ಟರ್ ಪರಿಷ್ಕೃತ ಪಾಠ್ಯಕ್ರಮವನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | 'ರಾಷ್ಟ್ರೀಯ ಶಿಕ್ಷಣ ನೀತಿ-2020' ನಿಯಮಾನುಸಾರ ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಭಾಗದ ಬಿ.ಎ. ಪ್ರಥಮ ಸೆಮಿಸ್ಟರ್‌ನಲ್ಲಿ Minor Core -1, 2 ವಿಷಯದಲ್ಲಿ ಪಾಠ್ಯಕ್ರಮವನ್ನು ಅಳವಡಿಸಲಾಗಿದೆ. ಈ ಪರಿಷ್ಕೃತ ಪಾಠ್ಯಕ್ರಮವನ್ನು ಪ್ರಶಿಕ್ಷಣ ಪರಿಷತ್‌ನ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಪರಿಷ್ಕೃತ ಪಾಠ್ಯಕ್ರಮವನ್ನು ಪ್ರಶಿಕ್ಷಣ ಪರಿಷತ್‌ನ 'ಸ್ಥಾಯಿ ಸಮಿತಿ'ಯಲ್ಲಿ ಪರಿಶೀಲಿಸಿ, ಅನುಮೋದಿಸುವಂತೆ ಸಭೆಯು ತೀರ್ಮಾನಿಸಲಾಯಿತು.** |

ಪ್ರೊ. ವಿ. ಗಿರೀಶ್‌ಚಂದ್ರ
ಕುಲಸಚಿವರು (ಪ್ರ)
Karnataka Samskrit University
Pampa Mahakavi Road, Chamarajpet,
Bengaluru - 560018. Ph: 080-26705387

ಪ್ರೊ. ಕೆ.ಇ. ದೇವನಾಥನ್
ಕುಲಪತಿಗಳು
Vice Chancellor
KARNATAKA SAMSKRIT UNIVERSITY
Pampa Mahakavi Road, Chamarajpet
Bengaluru-560 018. Phone : 080-26701303